ಮೂಲ ದಾವೆ ನಂ. 117/2019

ಪಿ.ಡಬ್ಲ್ಯೂ.1

ದಿನಾಂಕಃ 05.11.2022
ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.
ಮುಂದುವರೆದ ಪಾಟೀ ಸವಾಲು ಪ್ರತಿವಾದಿಯರ ಪರವಾಗಿ ಶ್ರೀ ಬಿ.ಆರ್ ವಕೀಲರಿಂದ ಃ

6. ಈಗ ನನ್ನ ವಯಸ್ಸು 58 ವರ್ಷ ಇರುತ್ತದೆ. ಈ ದಾವೆಯನ್ನು ನಾನು ಮತ್ತು ನನ್ನ ತಮ್ಮ ಇನ್ನೊಬ್ಬ ಹೈಯ್ಯಾಳಪ್ಪ ಸೇರಿ ದಾಖಲಿಸಿರುತ್ತೇವೆ. ನಮಿಬ್ಬರಲ್ಲಿ ನಾನು ದೊಡ್ಡವನಿರುತ್ತೇನೆ. ನನ್ನ ತಮ್ಮನ ವಯಸ್ಸು ಅಂದಾಜು 35 ವರ್ಷ ಇರುತ್ತವೆ. ನಾನು ದಾವೆಯಲ್ಲಿ ನನ್ನ ವಯಸ್ಸು 58 ವರ್ಷ ಎಂದು ಮತ್ತು ನನ್ನ ತಮ್ಮನ ವಯಸ್ಸು 35 ವರ್ಷ ಎಂದು ಬರೆಯಿಸಿರುತ್ತೇನೆ. ನನ್ನ ಸ್ವಂತ ತಂಗಿಯ ಹೆಸರು ಅಯ್ಯಮ್ಮ ಎಂದು ಇರುತ್ತದೆ. ಅವಳು 8-9 ವರ್ಷಗಳ ಹಿಂದೆ ಮರಣಹೊಂದಿರುತ್ತಾಳೆ. ಅವಳಿಗೆ 2 ಜನ ಮಕ್ಕಳಿರುತ್ತಾರೆ. ಅವರ ಹೆಸರು ಹರ್ಷ ಮತ್ತು ಶರಣಬಸು ಎಂದು ಇರುತ್ತದೆ. 1 ನೇ ವಾದಿ ನನ್ನ ಚಿಕ್ಕಪ್ಪನ ಮಗನಾಗಿರುತ್ತಾನೆ. ನನ್ನ ತಂಗಿಯ ಮಕ್ಕಳನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ. 1 ನೇಯ ವಾದಿಯ ತಂದೆಗೆ 3 ಜನ ಮಕ್ಕಳಿರುತ್ತಾರೆ. ರಂಗಪ್ಪ, ಹೈಯ್ಯಾಳಪ್ಪ (1 ನೇ ವಾದಿ) ಮತ್ತು ದೇವಮ್ಮ ಎಂದು ಇರುತ್ತದೆ. ದೇವಮ್ಮ ಈಗ ಜೀವಂತ ಇರುತ್ತಾಳೆ. ಅವಳು ದೇವದುರ್ಗಾ ತಾಲೂಕಿನ ಹರಸಣಗಿ ಗ್ರಾಮದಲ್ಲಿ ವಾಸವಾಗಿರುತ್ತಾಳೆ. ರಂಗಪ್ಪ ಮತ್ತು ದೇವಮ್ಮ ಇವರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿರುತ್ತೇನೆ. ನನ್ನ ತಂದೆ ನಿಂಗಪ್ಪ 20 ವರ್ಷಗಳ ಹಿಂದೆ ಮರಣಹೊಂದಿರುತ್ತಾನೆ.

ಪ್ರತಿವಾದಿ ವಕೀಲರ ಕೋರಿಕೆಯ ಮೇರೆಗೆ ಮುಂದುವರೆದ ಪಾಟೀ ಸವಾಲು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಪ್ರಕಾರ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ.ಸರಿ. ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು. ಪ್ರ.ದ.ನ್ಯಾ.ದಂ. ಶಹಾಪೂರ.